




‘ಕಾಸು... ಎಷ್ಟು ಖರ್ಚಾಗಬಹುದು?’

ಅವಳು ಬಿಡುವಂತೆ ತೋರಲಿಲ್ಲ.

‘ನನ್ನ ಪುಸ್ತಕ ಪ್ರಿಂಟ್ ಮಾಡಿಸಬೇಕೂಂತಿದ್ದರೆ ಕನಿಷ್ಠ ಐವತ್ತು ಸಾವಿರನಾದರೂ ಬೇಕಾಗುತ್ತದೆ. ಸರಿ ಪ್ರಿಂಟ್ ಆದ ಮೇಲೆ ಪುಸ್ತಕಗಳನ್ನು ಕೊಳ್ಳುವವರು ಯಾರು. ಮುನ್ನುಡಿ ಬರೆಸಬೇಕು, ಪುಸ್ತಕ ಬಿಡುಗಡೆ ಕಾರ್ಯಕ್ರಮ ಇಟ್ಕೊಬೇಕು. ಅದಕ್ಕೊಂದು ಸಭೆ ಸಭಾಂಗಣ. ನನಗೂ ಪುಸ್ತಕ ಬರಬೇಕೆಂಬ ಆಸೆ ಇಲ್ಲದೆ ಇಲ್ಲ. ಅದಕ್ಕೆಲ್ಲ ಬಂಡವಾಳ ಬೇಕಲ್ಲ...’

‘ಹಾಗಾದರೆ ಒಂದು ಕೆಲಸ ಮಾಡೋಣ, ನೀವು ದಿನಾ ಫೋನ್ ಮಾಡ್ತಿರಲ್ಲ. ಆ ಕಥೆಗಾರರನ್ನು ಕೇಳಿ. ಅವರಿಗೆ ಪ್ರಕಾಶಕರ ಬಗ್ಗೆ ಗೊತ್ತಿರುತ್ತದೆ.’ ನೆಲದ ಮೇಲೆ ಹಾಸಿದ್ದ ಹಾಸಿಗೆ ಮೇಲೆ ಮಲಗಿದ್ದ ಮಗಳು ದಿಢೀರನೆ ಎಚ್ಚರಗೊಂಡಾಗ, ನಾನು ಪ್ರಿಯಾಳನ್ನು ಬಳಸಿದ ಕೈಗಳನ್ನು ಸಡಿಲಗೊಳಿಸಿದೆ. ಪ್ರಿಯಾ ಲೈಟು ಹಾಕಿ ಮಗಳ ಜೊತೆ ಮಲಗಿದಳು.

ನಾನು ನಿದ್ರಿಸದೆ ಯೋಚಿಸುತ್ತಾ ಮಲಗಿದೆ. ಎಷ್ಟೋ ವರ್ಷಗಳಿಂದ ನಾನು ಕಥೆಗಳನ್ನು ಬರೆಯುತ್ತಿದ್ದೇನೆ. ಸಾಮಾನ್ಯ ಹೆಸರಾಂತ ಪತ್ರಿಕೆಗಳಲ್ಲಿ ಅವುಗಳು ಬೆಳಕು ಕಾಣುತ್ತಿದ್ದವು. ಇತ್ತೀಚಿಗೆ ಆನ್ಲೈನ್‌ನಲ್ಲಿ ಬಂದ ಒಂದು

